ದಿನಾಂಕಃ **31.07.2026**

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಜಿ.ಬಿ.ಹೆಚ್. ವಕೀಲರಿಂದಃ

1 ನೇ ಪ್ರತಿವಾದಿ ನನಗೆ ಸುಮಾರು 6 ವರ್ಷಗಳಿಂದ ಪರಿಚಯವಿರುತ್ತಾರೆ. ಮರಣ ಶಾಸನ ಬರೆಯಲು ಚನ್ನಪ್ಪ 1 ನೇ ಪ್ರತಿವಾದಿಯನ್ನು ಕರೆದುಕೊಂಡು ಬಂದಾಗ ನನಗೆ 1 ನೇ ಪ್ರತಿವಾದಿಯ ಪರಿಚಯವಾಗಿರುತ್ತದೆ. ಚನ್ನಪ್ಪ ನನಗೆ ಪರಿಚಯಸ್ಥರು. ಚನ್ನಪ್ಪರವರು ಬೆಂಗಳೂರಿನ ಮಲ್ಲೇಶ್ವರಂ ನಲ್ಲಿ ಸೌದೆ ಡಿಪೋ ನಲ್ಲಿ ಕೆಲಸ ಮಾಡುತ್ತಿದ್ದರು ಅವರು ನಮಗೆ ಮನೆ ಬಾಡಿಗೆಗೆ ನೀಡಿದ್ದರಿಂದ ಅವರ ಪರಿಚಯವಾಗಿರುತ್ತದೆ. ಚನ್ನಪ್ಪ ಬೆಂಗಳೂರಿನಲ್ಲಿ ಎಲ್ಲಿ ವಾಸವಾಗಿದ್ದರು ಎಂದು ವಿಳಾಸ ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರೆದು ಮಲ್ಲೇಶ್ವರಂ ನ ಕಾಡುಮಲ್ಲೇಶ್ವರ ದೇವಸ್ಥಾನದ ಎದುರಿಗೆ ಇದ್ದಂತಹ ಒಂದು ಶೀಟಿನ ಮನೆಯಲ್ಲಿ ವಾಸವಾಗಿದ್ದರು ಎಂದು ಉತ್ತರಿಸಿರುತ್ತಾರೆ. ಚನ್ನಪ್ಪನ ಹೆಂಡತಿ ಮಕ್ಕಳು ಎಲ್ಲರೂ ಅವರೊಂದಿಗೆ ವಾಸವಾಗಿದ್ದರೆ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಚನ್ನಪ್ಪರವರಿಗೆ ಮಕ್ಕಳು ಇರಲಿಲ್ಲ, ಹೆಂಡತಿ ತೀರಿಕೊಂಡಿದ್ದರು ಎಂದು ಉತ್ತರಿಸುತ್ತಾರೆ. ಸದರಿ ಶೀಟಿನ ಮನೆಯಲ್ಲಿ ಚನ್ನಪ್ಪನವರು 2017 ರ ಪೂರ್ವದಲ್ಲಿ ಸುಮಾರು 10 ವರ್ಷಗಳ ಕಾಲ ಅಲ್ಲಿ ವಾಸವಾಗಿದ್ದರು.

2. ನಿಡಿ-9 ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವ ನಿಂಗಮ್ಮರವರ ಬಗ್ಗೆ ನನಗೆ ಮರಣ ಶಾಸನ ಬರೆಯಲು ಕರೆದುಕೊಂಡು ಬಂದಾಗ ಪರಿಚಯವಾಗಿರುತ್ತದೆ. ಅದಕ್ಕಿಂತ ಪೂರ್ವದಲ್ಲಿ ನನಗೆ ಅವರ ಪರಿಚಯವಿರಲಿಲ್ಲ. ನಿಂಗಮ್ಮರವರನ್ನು ನನಗೆ ಚನ್ನಪ್ಪರವರು ಪರಿಚಯ ಮಾಡಿಕೊಟ್ಟಿರುತ್ತಾರೆ. ನಿಂಗಮ್ಮರವರ ಯಾವುದೇ ಗುರುತಿನ ಚೀಟಿಯನ್ನು

ನಾನು ನೋಡಿರುವುದಿಲ್ಲ. ಚನ್ನಪ್ಪರವರು ಸದರಿ ದಿನದಂದು ಅವರ ಗುರುತಿನ ಚೀಟಿಗಳನ್ನು ತಂದಿದ್ದರು. ಆದರೆ ಯಾವ ದಾಖಲೆಯನ್ನು ತಂದಿದ್ದರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಸದರಿ ದಿನದಂದು ಚನ್ನಪ್ಪರವರ ತಂದೆ ಬರೆದಿದ್ದಂತ ಮರಣ ಶಾಸನವನ್ನು ತಂದಿದ್ದರು. ಸದರಿ ದಾಖಲೆ ನೊಂದಣಿಯಾಗಿತ್ತು. ಚನ್ನಪ್ಪರವರ ತಂದೆಯ ಹೆಸರು ಹೊಂಬಣ್ಣ.

3. ಮರಣ ಶಾಸನ ಬರೆಯುವ ಕಾಲಕ್ಕೆ ಚನ್ನಪ್ಪರವರಿಗೆ ಸುಮಾರು 65 ವರ್ಷ ವಯಸ್ಸಾಗಿತ್ತು. ನಿಡಿ-9 ನ್ನು ಬರೆದ ಪತ್ರಬರಹಗಾರರಾದ ಸುರೇಂದ್ರರವರ ಪರಿಚಯ ನನಗೆ ಇರುವುದಿಲ್ಲ. 1 ನೇ ಪ್ರತಿವಾದಿ ನಿಡಿ-9 ರ ಬರಹಗಾರರಾದ ಸುರೇಂದ್ರರವರ ಕಛೇರಿಯಲ್ಲಿ ಗುಮಾಸ್ತರಾಗಿ ಕೆಲಸ ಮಾಡುತ್ತಿದ್ದರು ಎಂದು ಸೂಚಿಸುವುದು ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿ ಸ್ನೇಹಿತರಾಗಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ಚನ್ನಪ್ಪರವರ ಪರಿಚಯ ನನಗೆ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. 2016 ರಲ್ಲಿ ಚನ್ನಪ್ಪರವರಿಗೆ ಮರಣ ಶಾಸನ ಬರೆಯುವಂತಹ ಬುದ್ಧಿ ಜ್ಞಾನ ಮತ್ತು ಆರೋಗ್ಯ ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಮರಣ ಶಾಸನವನ್ನು 1 ನೇ ಪ್ರತಿವಾದಿಯ ಹೇಳಿಕೆಯ ಮೇರೆಗೆ ತಯಾರಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ನಿಡಿ-9 ರ ನೊಂದಣಿಗೆ ಸಂಬಂಧಿಸಿದ ಎಲ್ಲಾ ವೆಚ್ಚವನ್ನು 1 ನೇ ಪ್ರತಿವಾದಿಯೇ ನೀಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.ಸಾಕ್ಷಿ ಮುಂದುವರೆದು ಚನ್ನಪ್ಪ ನೀಡಿರುತ್ತಾರೆ ಎಂದು ಉತ್ತರಿಸುತ್ತಾರೆ.

4. ನಾನು, 1 ನೇ ಪ್ರತಿವಾದಿ ಮತ್ತು ನಿಡಿ-9 ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವ ನಿಂಗಮ್ಮ ಶಾಮಿಲ್ ಆಗಿ ನಿಡಿ-9 ನ್ನು ಸೃಷ್ಟಿ ಮಾಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. 1 ನೇ ಪ್ರತಿವಾದಿಗೆ ಸಹಾಯ ಮಾಡಲು 1 ನೇ ಪ್ರತಿವಾದಿಯ ಹೇಳಿಕೆಯ ಮೇರೆಗೆ ಸುಳ್ಳು ಪ್ರಮಾಣ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ